**CC 2109/2017**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ**
**ನ್ಯಾಯಾಲಯ, ಹೊಸಪೇಟೆ.**
**ಸಿಸಿ ನಂಬರ್** 2109/2017

**ಸಿ ಡಬ್ಲೂ** -12
**ಪಿ ಡಬ್ಲೂ** - 10

**ಸಾಕ್ಷಿಯ ಹೆಸರು** - **ಭಾರತಿ**
**ಗಂಡನ ಹೆಸರು** - **ಹೇಮಗಿರಿಯಪ್ಪ**
**ವಯಸ್ಸು** - 40 **ವರ್ಷಗಳು**
**ಉದ್ಯೋಗ** - **ಕೂಲಿ ಕೆಲಸ**
**ವಾಸಸ್ಥಳ** - **ಹಳೆ ಮಲಪನಗುಡಿ**

**ಸಾಕ್ಷಿಯನ್ನು ದಿನಾಂಕಃ** 18-09-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಹೊಸಪೇಟೆಯ ಬಿ. ರವಿ ಕುಮಾರ ಎಂಬ ವ್ಯಕ್ತಿ ಸಾಲ ಮಾಡಿಸಿ ಕೊಡುವುದಾಗಿ ನಮಗೆ ತಿಳಿಸಿದ್ದ. ನಾವುಗಳು ಆತನಿಗೆ ಅರ್ಜಿ ಮತ್ತು ನಮ್ಮ ಆಧಾರ ಕಾರ್ಡ ಮತ್ತು ಬ್ಯಾಂಕ್ ಪಾಸ್ ಬುಕ್ ನಕಲುಗಳನ್ನು ಕೊಟ್ಟಿದ್ದೇವು. ನಂತರ ನನಗೆ ಯಾವುದೇ ಸಾಲ ಕೊಟ್ಟಿರುವುದಿಲ್ಲ. ಆ ವ್ಯಕ್ತಿ ಆಗಿನಿಂದ ಪತ್ತೆಯಾಗಿರುವುದಿಲ್ಲ.

ನಂತರ ಬಜಾಜ್ ಪೈನಾನ್ಸ್ ರವರು ನಮ್ಮ ಮನೆಯ ಹತ್ತಿರ ಬಂದು ನಾನು ಅವರಿಂದ ಸಾಲ ಪಡೆದಿರುತ್ತೇನೆ ಎಂದು ತಿಳಿಸಿದಾಗ ನಾನು ಸಾಲ ತೆಗೆದುಕೊಂಡಿಲ್ಲ ಎಂದು ತಿಳಿಸಿರುತ್ತೇನೆ. ಸದರಿ ಸಾಲವನ್ನು ರವಿ ಕುಮಾರ ರವರೇ ನಮ್ಮ ಹೆಸರಿನಲ್ಲಿ ಪಡೆದಿರುತ್ತಾರೆ. ಬಜಾಜ್ ಪೈನಾನ್ಸ್ ರವರು ಗಲಾಟೆ ಮಾಡಿದಾಗ ನಾವು ಪ್ರಕರಣ ದಾಖಲಿಸಿರುತ್ತೇವೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ನಮ್ಮ ಹೆಸರಿನಲ್ಲಿ 1 ನೇ ಆರೋಪಿ ಸಾಲ ಪಡೆದು 4 ನೇ ಆರೋಪಿಯ ಅಂಗಡಿಯಲ್ಲಿ ಸಾಮಾನುಗಳನ್ನು ಖರೀದಿಸಿದ್ದ ಅಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಹೆಚ್. ಆರ್., ವಕೀಲರಿಂದಃ** ಇಲ್ಲಾ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.